# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2019 (II)
ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2019 (II)

## LAW PAPER I
ಕಾನೂನು ಪತ್ರಿಕೆ – I

Date: 09.11.2019
ದಿನಾಂಕ: 09ನೇ ನವೆಂಬರ್ 2019

Max Marks: 100
ಗರಿಷ್ಠ ಅಂಕಗಳು : 100

Time: 2.00 PM to 5.00 PM
ಸಮಯ: ಮಧ್ಯಾಹ್ನ 2.00 ರಿಂದ 5.00 ಗಂಟೆ

**Instructions:**
ಸೂಚನೆಗಳು:

1. Option is given to the candidates to write answers either in English or in Kannada

ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, the questions as framed in English language shall prevail.

ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

## Part I
## ಭಾಗ – 1

## The Code of Civil Procedure, 1908 and Principles of pleadings
### ದಿವಾಣಿ ಪ್ರಕ್ರಿಯಾ ಸಂಹಿತೆ, 1908 ಮತ್ತು ದಾವಾ ಪ್ರತಿದಾವಾ ಪತ್ರಗಳ ತತ್ವಗಳು

**1. Write short notes on Any Two of the following subjects with reference to Relevant Provisions of Law**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ವಿಷಯಗಳ ಬಗ್ಗೆ ಅದಕ್ಕೆ ಸಂಬಂಧಪಟ್ಟಂತ ಕಾನೂನುಗಳನ್ನು ಉಲ್ಲೇಖಿಸಿ ಟಿಪ್ಪಣಿ ಬರೆಯಿರಿ. **5x 2=10**

a) Rejection of plaint.
ವಾದಪತ್ರವನ್ನು ತಿರಸ್ಕರಿಸುವುದು.

b) Alternative Dispute Resolution Mechanism.
ವ್ಯಾಜ್ಯಗಳ ಪರ್ಯಾಯ ಇತ್ಯರ್ಥದ ಸಾಧನ.

c) The appointment of Court Commissioner.
ನ್ಯಾಯಾಲಯದ ಆಯುಕ್ತರ ನೇಮಕಾತಿ

**Answer Any Two of the following questions with reference to the Relevant Provisions of Law**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಅದಕ್ಕೆ ಸಂಬಂಧಪಟ್ಟಂತ ಕಾನೂನುಗಳನ್ನು ಉಲ್ಲೇಖಿಸಿ ಉತ್ತರ ಬರೆಯಿರಿ **10 x 2=20**

2. Framing of issues, materials to be considered while framing the issues, types of issues and the issues, which can be considered as preliminary issue.

ವಿವಾದಾಂಶಗಳನ್ನು ರೂಪಿಸುವುದು, ವಿವಾದಾಂಶಗಳನ್ನು ರೂಪಿಸಲು ಪರಿಗಣಿಸಬೇಕಾದ ವಿಷಯಗಳು, ವಿವಾದಾಂಶಗಳ ವಿಧಗಳು ಮತ್ತು ಯಾವ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶ ಎಂದು ಪರಿಗಣಿಸಬಹುದು.

3. Discuss about the Law relating to 'Pleadings'. Explain the circumstances and stages, when an amendment of pleadings can be permitted and cannot be permitted.

'ವಾದಗಳಿಗೆ' ಸಂಬಂಧಪಟ್ಟ ಕಾನೂನುಗಳ ಬಗ್ಗೆ ಚರ್ಚಿಸಿ. ಯಾವ ಸಂದರ್ಭದಲ್ಲಿ ಮತ್ತು ಹಂತದಲ್ಲಿ ವಾದಗಳನ್ನು ತಿದ್ದುಪಡಿಯನ್ನು ಮಾಡಲು ಪರವಾನಿಗೆ ನೀಡಬಹುದು ಮತ್ತು ನೀಡಲು ಆಗುವುದಿಲ್ಲ ಎನ್ನುವ ಬಗ್ಗೆ ವಿವರಿಸಿ.

4. What are the principles governing the grant of temporary injunction? What are the procedures to be followed while granting exparte temporary injunction order?

ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಇರುವ ತತ್ವಗಳು ಏನು? ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಮಾಡುವಾಗ ಪಾಲಿಸಬೇಕಾದ ಪ್ರಕ್ರಿಯೆಗಳು ಏನು?

## Part II

### ಭಾಗ – 2

### The Code of Criminal Procedure, 1973

ಅಪರಾಧ ಪ್ರಕ್ರಿಯಾ ಸಂಹಿತೆ, 1973

**5. Write short notes on Any Two of the following subjects with Relevant Provisions of Law:**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ವಿಷಯಗಳಿಗೆ ಅವುಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಉಲ್ಲೇಖಿಸಿ ಟಿಪ್ಪಣಿ ಬರೆಯಿರಿ: **5 x 2=10**

a) Complaints to the Magistrate
ದಂಡಾಧಿಕಾರಿಗಳಿಗೆ ಫಿರ್ಯಾದುಗಳು

b) Plea bargaining
ಅಪಾದನೆಯ ರಾಜಿ

c) Search Warrant
ಶೋಧನಾ ವಾರಂಟ್

**Answer Any Two of the following questions with Relevant Provisions of Law.**

ಈ ಕೆಳಗಿನವುಗಳ ಪೈಕಿ ಎರಡು ಪ್ರಶ್ನೆಗಳಿಗೆ ಅವುಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಉಲ್ಲೇಖಿಸಿ ಉತ್ತರಿಸಿರಿ.

**10 x 2=20**

6. Explain the procedures relating to trial of warrant cases by magistrates, both instituted on a police report and otherwise than on a police report.

ದಂಡಾಧಿಕಾರಿಗಳಿಂದ, ಪೋಲೀಸ್ ವರದಿಯ ಮೇಲೆ ಮತ್ತು ಪೋಲೀಸ್ ವರದಿಯ ಮೇಲಲ್ಲದೆ ಅನ್ಯತ ಹೂಡಲಾದ, ವಾರಂಟು ಮೊಕದ್ದಮೆಗಳ ಅಧಿವಿಚಾರಣೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

7. Explain the procedures relating to grant of bail in bailable and non-bailable offences and grant of anticipatory bail.

ಜಾಮೀನಿಯ ಮತ್ತು ಜಾಮೀನಿಯವಲ್ಲದ ಅಪರಾಧಗಳ ಬಗ್ಗೆ ಜಾಮೀನು ನೀಡುವ ನಿಯಮಗಳನ್ನು ಮತ್ತು ನಿರೀಕ್ಷಣಾ ಜಾಮೀನು ನೀಡುವ ಬಗ್ಗೆ ನಿಯಮಗಳನ್ನು ವಿವರಿಸಿ.

8. Discuss about charge, contents of the charge, alteration of charge and effect of errors in framing charges.

ಆರೋಪ, ಆರೋಪದ ಒಳಾಂಶಗಳು, ಆರೋಪಗಳನ್ನು ಬದಲಾಯಿಸುವುದು ಮತ್ತು ಆರೋಪ ರಚನೆಯಲ್ಲಿ ಲೋಪವಿದ್ದಾಗ ಆಗುವ ಪರಿಣಾಮಗಳ ಬಗ್ಗೆ ಚರ್ಚಿಸಿ.

## Part III

## ಭಾಗ – 3

## The Indian Evidence Act, 1872

**ಭಾರತೀಯ ಸಾಕ್ಷ್ಯ ಅಧಿನಿಯಮ, 1872**

**9. Write short notes on <u>Any Two</u> of the following subjects with <u>Relevant Provisions of Law:</u>**

**ಈ ಕೆಳಗಿನವುಗಳ ಪೈಕಿ ಯಾವುದಾದರೂ <u>ಎರಡು ವಿಷಯಗಳಿಗೆ</u> ಅವುಗಳಿಗೆ <u>ಸಂಬಂಧಪಟ್ಟ ಕಾನೂನುಗಳನ್ನು</u> ಉಲ್ಲೇಖಿಸಿ ಟಿಪ್ಪಣಿ ಬರೆಯಿರಿ:**

**5 x 2=10**

a) Test Identification Parade
ಗುರುತು ಪರೀಕ್ಷಣಾ ಕವಾಯತು

b) Presumption as to dowry death
ವರದಕ್ಷಿಣೆ ಸಾವಿನ ಬಗ್ಗೆ ಪೂರ್ವಭಾವನೆ

c) Testimony of an accomplice
ಸಹಾಪರಾಧಿಯ ಸಾಕ್ಷ್ಯ

**Answer <u>Any One</u> of the following questions with <u>Relevant Provision of Law.</u>**

**ಈ ಕೆಳಗಿನವುಗಳ ಪೈಕಿ <u>ಒಂದು ಪ್ರಶ್ನೆಗೆ</u> ಅದಕ್ಕೆ <u>ಸಂಬಂಧಿಸಿದ ಕಾನೂನುಗಳನ್ನು</u> ಉಲ್ಲೇಖಿಸಿ ಉತ್ತರಿಸಿರಿ.**

**10 x 1=10**

10. Explain the differences between Primary and Secondary Evidence. Under what circumstances Secondary Evidence is admissible?

ಪ್ರಾಥಮಿಕ ಮತ್ತು ಗೌಣ ಸಾಕ್ಷ್ಯ (ಮಾಧ್ಯಮಿಕ ಸಾಕ್ಷ್ಯ) ಮಧ್ಯೆ ಇರುವ ವ್ಯತ್ಯಾಸದ ಬಗ್ಗೆ ವಿವರಿಸಿ. ಯಾವ ಸಂಧರ್ಬದಲ್ಲಿ ಗೌಣ ಸಾಕ್ಷ್ಯ (ಮಾಧ್ಯಮಿಕ ಸಾಕ್ಷ್ಯ) ಸ್ವೀಕಾರಾರ್ಹವಾಗುತ್ತದೆ?

11. Distinguish between may presume, shall presume and conclusive proof.

ಪೂರ್ವಭಾವನೆ ಮಾಡಬಹುದು, ಪೂರ್ವಭಾವನೆ ಮಾಡತಕ್ಕದ್ದು ಮತ್ತು ನಿರ್ಣಾಯಕ ರುಜುವಾತುಗಳ ವಿಭಿನ್ನತೆಯನ್ನು ಮಾಡಿ.

## Part IV

ಭಾಗ – 4

### The Constitution of India

ಭಾರತ ಸಂವಿಧಾನ

**12. Write short notes on Any Two of the following questions**

ಈ ಕೆಳಗಿನ ಪ್ರಶ್ನೆಗಳ ಪೈಕಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **5 x 2=10**

a) Power of the President to proclaim emergency
ರಾಷ್ಟ್ರಪತಿಯವರ ತುರ್ತು ಪರಿಸ್ಥಿತಿಯ ಘೋಷಣೆಯ ಅಧಿಕಾರ

b) Equal justice and free legal aid
ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು

c) Fundamental Duties
ಮೂಲಭೂತ ಕರ್ತವ್ಯಗಳು

**Answer Any One of the following questions.**
ಈ ಕೆಳಗಿನವುಗಳ ಪೈಕಿ ಒಂದು ಪ್ರಶ್ನೆಗೆ ಉತ್ತರಿಸಿರಿ. **10 x 1=10**

13. Describe the procedure for carrying out amendments to the Constitution of India. Can fundamental rights be amended?

ಭಾರತ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಪ್ರಕ್ರಿಯೆಗಳ ಬಗ್ಗೆ ವಿವರಿಸಿ. ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಮಾಡಬಹುದೇ?

14. Discuss about 'Fundamental Rights' and 'Directive Principles of State Policy'.

'ಮೂಲಭೂತ ಹಕ್ಕುಗಳು' ಮತ್ತು 'ರಾಜ್ಯ ನಿರ್ದೇಶಕ ತತ್ವಗಳ' ಬಗ್ಗೆ ಚರ್ಚಿಸಿ.

***********